ಸಿ.ಸಿ. ಸಂಃ 406/2018 ಪಿ.ಡಬ್ಲ್ಯು: 01

ದಿನಾಂಕಃ 13-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು: 1 ನೇ ಆಪಾದಿತನ ಪರ ಶ್ರೀ. ಹೆಚ್.ಎಲ್.ವಿ. ವಕೀಲರಿಂದಃ**

ನಿಪಿ-1 ಅನ್ನು ಪೋಲೀಸ್ ಠಾಣೆಯಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಎಂ.ಸಿ.ಸಿ ಸ್ಕ್ವೇರ್ ರವರಿಗೆ ಬಾತ್ಮಿ ಬಂದಿರುತ್ತದೆ. ಸಂಜೆ 7-8 ಗಂಟೆ ಸಮಯದಲ್ಲಿ ಬಾತ್ಮಿ ಬಂದಿರುತ್ತದೆ. ಸದರಿ ಸಮಯದಲ್ಲಿ ಕತ್ತಲು ಆವರಿಸಿತ್ತು ಎಂದರೆ ಸರಿ. ಆದ್ದರಿಂದ ಸ್ಥಳದಲ್ಲಿ ಯಾರು ಇದ್ದರು ಎಂದು ನನಗೆ ಗೊತ್ತಾಗಲಿಲ್ಲ ಎಂದರೆ ಸರಿ. ಮುಮಾ-1 ರಿಂದ 8 ಅನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವುದೇ ಸ್ಥಳ ಪರಿಶೀಲಿಸಿಲ್ಲ, ವಾಹನವನ್ನು ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ನಾನು, ಫ್ರಾಸಾ-2 ಮತ್ತು ಅಬಕಾರಿ ನಿರೀಕ್ಷಕರು ಸಹಿಗಳನ್ನು ಮಾಡಿರುತ್ತೇವೆ. ನಿಪಿ-1 ಕ್ಕೆ ನಮ್ಮ ತಂಡದ ಲೀಡರ್ ಒಬ್ಬರು ಸಹಿ ಮಾಡಿರುತ್ತಾರೆ. ಸ್ಥಳದಲ್ಲಿ ನಮಗೆ ಯಾವುದೇ ಪೆಟ್ಟಿಗೆ ಸಿಗಲಿಲ್ಲ ಎಂದರೆ ಸರಿಯಲ್ಲ. ಸದರಿ ಪೆಟ್ಟಿಗೆ ಯಾರದು ಎಂದು ನಿಖರವಾಗಿ ಗೊತ್ತಿರಲಿಲ್ಲ ಎಂದರೆ ಸರಿ. ಮುಮಾ-1 ರಿಂದ 8 ಕ್ಕೂ ಮತ್ತು ಆಪಾದಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಂಕಿ ಅಂಶಗಳಿಗಾಗಿ ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 2 ನೇ ಆಪಾದಿತನ ಪರ ಶ್ರೀ. ವಿ.ವಿ.ಕೆ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದರು.**

**(**ಮರುವಿಚಾರಣೆ ಇರುವುದಿಲ್ಲ**.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು